ಸ್ವಾತಂತ್ರ್ಯ ದಿನಾಚರಣೆ
(Text Book Actvity)

---

ಈ. ಯಾರು-ಯಾರಿಗೆ ಹೇಳಿದರು ತಿಳಿಸಿ.
೧) "ನಮ್ಮ ಶಾಲೆಯಲ್ಲೂ ಆಚರಿಸುತ್ತೇವಲ್ಲ ಸರ್?"
ಉ : ಯಾರು ಹೇಳಿದರು ? ಷರೀಫ ಹೇಳಿದನು.
ಯಾರಿಗೆ ಹೇಳಿದರು ? ಮುಖ್ಯ ಗುರುಗಳಿಗೆ ಹೇಳಿದನು.

---

೨) "ಒಳ್ಳೆಯದು. ಮೇರಿಯ ಸಲಹೆ ಎಲ್ಲರಿಗೂ ಒಪ್ಪಿಗೆಯೇ?"
ಉ : ಯಾರು ಹೇಳಿದರು ? ಮುಖ್ಯ ಗುರುಗಳು ಹೇಳಿದರು.
ಯಾರಿಗೆ ಹೇಳಿದರು ? ವಿದ್ಯಾರ್ಥಿಗಳಿಗೆ ಹೇಳಿದರು.

---

೩) "ನಮ್ಮ ತೋಟದಿಂದ ಮಾವಿನ ತಳಿರು, ಬಾಳೆಕಂಬ ತರುತ್ತೇನೆ"
ಉ : ಯಾರು ಹೇಳಿದರು ? ರಾಜು ಹೇಳಿದನು
ಯಾರಿಗೆ ಹೇಳಿದರು ? ತನ್ನ ಸಹಪಾಠಿಗಳಿಗೆ ಹೇಳಿದನು.

---

ಉ. ಸ್ವಂತ ವಾಕ್ಯದಲ್ಲಿ ಬಳಸಿರಿ.
೧) ತೋರಣ - ಹಬ್ಬದ ದಿನದಂದು ತೋರಣದಿಂದ ಮನೆಯನ್ನು ಸಿಂಗರಿಸಲಾಗುತ್ತದೆ.

---

೨) ರಂಗವಲ್ಲಿ - ಮನೆಯ ಮುಂದೆ ರಂಗವಲ್ಲಿ ಹಾಕುತ್ತೇವೆ.

---

೩) ಬಹುಮಾನ - ಕ್ರೀಡಾ ಸ್ಪರ್ಧೆಯಲ್ಲಿ ನನಗೆ ಬಹುಮಾನ ದೊರೆಯಿತು.

---

೪) ಸಮವಸ್ತ್ರ - ನಾವು ಪ್ರತಿದಿನ ಶಾಲೆಗೆ ಸಮವಸ್ತ್ರದಲ್ಲಿ ಹೋಗುತ್ತೇವೆ.

---

ಊ. ಸರಿ - ತಪ್ಪು ಗುರುತಿಸಿರಿ.
೧) ಕಾರ್ಯಕ್ರಮ ಮಾಡುವಾಗ ಕೆಲಸ ಹಂಚಿಕೊಳ್ಳಬಾರದು - ತಪ್ಪು

---

೨) ಕಾರ್ಯಕ್ರಮ ಮಾಡುವ ಮೊದಲು ಸಭೆಯಲ್ಲಿ ಚರ್ಚೆ ಮಾಡಬೇಕು - ಸರಿ.

---

೩) ಚರ್ಚೆಯಲ್ಲಿ ಇತರರು ಮಾತನಾಡುವಾಗ ಕೇಳಿಸಿಕ್ಕೊಳ್ಳಬೇಕು- ಸರಿ

---

೪) ಸಭೆಯಲ್ಲಿ ಒಟ್ಟಾಗಿ ಮಾತನಾಡಿದರೆ ತೊಂದರೆ - ಸರಿ

---

೫) ಸಭೆಯಲ್ಲಿ ಒಬ್ಬರ ಅನಂತರ ಒಬ್ಬರು ಮಾತನಾಡಬಾರದು - ತಪ್ಪು

---

೬) ಇತರರ ಒಳ್ಳೆಯ ಮಾತನ್ನು ಕೇಳಬೇಕು - ಸರಿ.

---

ಆ.ಉತ್ತರಿಸು.
೧.ನೀನು ಶಾಲೆಯಲ್ಲಿ ವಹಿಸಿಕೊಂಡು ಮಾಡಿದ ಒಂದು ಕೆಲಸವನ್ನು ಬರೆ.
ಉ : ನಾನು ನನ್ನ ತರಗತಿಯನ್ನು ಸ್ವಚ್ಛ ಗೊಳಿಸಿದೆ.

---

೨.ನೀನು ಮನೆಯಲ್ಲಿ ವಹಿಸಿಕೊಂಡು ಮಾಡಿದ ಒಂದು
ಕೆಲಸವನ್ನು ಬರೆ.
ಉ: ನಲ್ಲಿ ನೀರು ತುಂಬಿದೆ.

---

೩.ನಿನ್ನ ಮನೆಯಲ್ಲಿ ಎಲ್ಲರೂ ಕುಳಿತು ಚರ್ಚಿಸಿ ಮಾಡಿರುವ
ಕೆಲಸ ಯಾವುದು?
ಉ: ಪ್ರವಾಸ ಹೋಗುವ ಕುರಿತು ಚರ್ಚಿಸಿದೆವು.

---

ಭಾಷಾಭ್ಯಾಸ

ಅ.ಸರಿಯಾದ ಅರ್ಥ ಬರುವಂತೆ ಪದಗಳನ್ನು ಜೋಡಿಸಿ
ವಾಕ್ಯಗಳನ್ನು ಸರಿಪಡಿಸಿ ಬರೆ.
೧.ಸಮವಸ್ತ್ರ / ಮಕ್ಕಳು / ಧರಿಸಿ / ಬಂದರು / ಶಾಲೆಗೆ
ಉ: ಮಕ್ಕಳು ಸಮವಸ್ತ್ರ ಧರಿಸಿ ಶಾಲೆಗೆ ಬಂದರು.

---

೨.ಮಕ್ಕಳು / ಸಾಂಸ್ಕೃತಿಕ / ನಡೆಸಿಕೊಟ್ಟರು / ಕಾರ್ಯಕ್ರಮ.
ಉ: ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು

---

೩.ಕೈತೋಟದಲ್ಲಿ / ಶಾಲೆಯ / ಹೂ / ಗಿಡಗಳಿವೆ.
ಉ: ಶಾಲೆಯ ಕೈತೋಟದಲ್ಲಿ ಹೂ ಗಿಡಗಳಿವೆ.

---

ಆ. ಅ, ಆ ಮತ್ತು ಇ ಮನೆಗಳಲ್ಲಿರುವ ಪದಗಳನ್ನು ಕ್ರಮವಾಗಿ
ಬಳಸಿ ಅರ್ಥಪೂರ್ಣ ವಾಕ್ಯಗಳನ್ನು ರಚಿಸು.

| ಅ | ಆ | ಇ | ವಾಕ್ಯಗಳು |
|---|---|---|---|
| ನಾನು | | ಹೋಗುತ್ತವೆ | ನಾನು ಮನೆಗೆ ಹೋಗುತ್ತೇನೆ |
| ನೀನು | | ಹೋಗುತ್ತೇನೆ | ನೀನು ಮನೆಗೆ ಹೋಗುವೆಯಾ |
| ಅವನು | | ಹೋಗುವೆಯಾ | ಅವನು ಮನೆಗೆ ಹೋಗುತ್ತಾನೆ |
| ಅವಳು | ಮನೆಗೆ | ಹೋಗುತ್ತಾನೆ | ಅವಳು ಮನೆಗೆ ಹೋಗುತ್ತಾಳೆ |
| ರಮೇಶ | | ಹೋದರು | ರಮೇಶ ಮನೆಗೆ ಹೋಗಲಿಲ್ಲ |
| ಕವಿತಾ | | ಹೋಗಲಿಲ್ಲ | ಕವಿತಾ ಮನೆಗೆ ಹೋಗಬೇಕು |
| ಗುರುಗಳು | | ಹೋಗಬೇಕು | ಗುರುಗಳು ಮನೆಗೆ ಹೋದರು. |
| ಹಸುಗಳು | | ಹೋಗುತ್ತಾಳೆ | ಹಸುಗಳು ಮನೆಗೆ ಹೋಗುತ್ತವೆ |